**All India Radio: Bangalore**
**National Bulletin In Kannada**
**23.01.2025 13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**23.01.2025 13.10 p.m.**

**<><><><>**

ಮುಖ್ಯಾಂಶಗಳು

1. ಇಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಜನ್ಮ ದಿನ ; ದೇಶಾದ್ಯಂತ ಪರಾಕ್ರಮ ದಿನವಾಗಿ ಆಚರಣೆ ; ಒಡಿಶಾದ ಕಟಕ್‌ನಲ್ಲಿ ಪ್ರದಾನ ಕಾರ್ಯಕ್ರಮ
2. ೭೬ನೇ ಗಣರಾಜ್ಯೋತ್ಸವ ಹಿನ್ನೆಲೆ ; ದೇಶದ ಸಾಂಸ್ಕೃತಿಕ ವೈವಿಧ್ಯತೆ ಬಿಂಬಿಸುವ ೨೬ ಸ್ಥಬ್ಧಚಿತ್ರಗಳ ಪ್ರದರ್ಶನ
3. ಭಾರತದೊಂದಿಗೆ ವ್ಯಾಪಾರ ಪುನಾರಂಭ ಕುರಿತು ಪಾಕಿಸ್ತಾನದೊಂದಿಗೆ ಮಾತುಕತೆ ಇಲ್ಲ - ಡಾ. ಎಸ್. ಜೈಶಂಕರ್
4. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಆಕಾಶವಾಣಿ ಕೇಂದ್ರದ ಸಾಮರ್ಥ್ಯವೃದ್ಧಿ ಕಾರ್ಯಕ್ಕೆ ಸಚಿವ ಡಾ. ಎಲ್. ಮುರುಗನ್ ಚಾಲನೆ
5. ಮಹಿಳಾ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿ ; ಸಂಜೆ ರಾಂಚಿಯಲ್ಲಿ ಒಡಿಶಾ ವಾರಿಯರ್ಸ್- ದೆಹಲಿ ಎಸ್‌ಜಿ ಪೈಪರ್ಸ್ ಮುಖಾಮುಖಿ

<><><><>

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನವನ್ನು ಇಂದು ಪರಾಕ್ರಮ ದಿನವಾಗಿ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನೇತಾಜಿ ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ. ರಾಷ್ಟ್ರಪತಿ ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ನೇತಾಜಿ ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ಫೂರ್ತಿಯ ಮತ್ತು ದೃಢಸಂಕಲ್ಪದ ನಾಯಕರಾಗಿದ್ದರು. ಅವರು, ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಜನರ ಸೇರ್ಪಡೆಗೆ ಸ್ಫೂರ್ತಿಯಾಗಿದ್ದರು ಎಂದು ಹೇಳಿದ್ದಾರೆ. ನೇತಾಜಿ ಅವರ ಸ್ವಾತಂತ್ರ್ಯ ಗಳಿಸುವ ನಿರಂತರ ಬದ್ಧತೆ ಮತ್ತು ಆಜಾದ್ ಹಿಂದ್ ಫೌಜ್ ಮೂಲಕ ತಮ್ಮ ಧೈರ್ಯಶಾಲಿ ನಾಯಕತ್ವದಿಂದ ಭಾರತದ ಯುವಪೀಳಿಗೆಗೆ ಇಂದಿಗೂ ಸ್ಫೂರ್ತಿ

ತುಂಬುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ತಮ್ಮ ಸಂದೇಶದಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ನೇತಾಜಿ ಅವರ ಬದ್ಧತೆ ಅಸಾಧಾರಣವಾಗಿತ್ತು. ಅವರ ಶೌರ್ಯ ಮತ್ತು ದೂರದೃಷ್ಟಿಗೆ ಆಜಾದ್ ಹಿಂದ್ ಫೌಜ್ ಒಂದು ಸಂಕೇತವಾಗಿತ್ತು. ಭಾರತವನ್ನು ವಿದೇಶಿ ಆಡಳಿತದಿಂದ ಮುಕ್ತಗೊಳಿಸುವಲ್ಲಿ ಅವರ ಕೊಡುಗೆ ಅಸಮಾನ್ಯ. ಮಾತೃಭೂಮಿಗಾಗಿ ಅವರು, ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದರು ಎಂದು ಸ್ಮರಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು, ಭಾರತದ ಸ್ವಾತಂತ್ರ್ಯ ಚಳುವಳಿಗೆ ಅಸಾಧಾರಣ ಕೊಡುಗೆ ನೀಡಿದ್ದಾರೆ. ಅವರು, ಶೌರ್ಯ ಮತ್ತು ದೃಢ ಸಂಕಲ್ಪದ ಪ್ರತೀಕವಾಗಿದ್ದು, ಅವರ ದೂರದೃಷ್ಟಿ ಇಂದಿಗೂ ದೇಶಕ್ಕೆ ಸ್ಫೂರ್ತಿಯಾಗಿದ್ದು, ಅವರ ಕನಸಿನ ಭಾರತ ನಿರ್ಮಾಣ ನಿಟ್ಟಿನಲ್ಲಿ ನಾವು ಕಾರ್ಯ ನಿರ್ವಹಿಸೋಣ ಎಂದು ಹೇಳಿದ್ದಾರೆ.

<><><><>

೭೭ನೇ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸಚಿವಾಲಯಗಳ ಒಟ್ಟು ೨೭ ಸ್ಥಬ್ಧಚಿತ್ರಗಳು ದೇಶದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಒಳಗೊಳ್ಳುವಿಕೆಯನ್ನು ಪ್ರಸ್ತುತಪಡಿಸಲಿವೆ. 'ಸ್ವರ್ಣಿಮ ಭಾರತ: ವಿರಾಸತ್ ಔರ್ ವಿಕಾಸ್' ಎಂಬ ಘೋಷವಾಕ್ಯವನ್ನು ಸ್ಥಬ್ಧಚಿತ್ರಗಳು ಆಧರಿಸಿವೆ. ಪಥಸಂಚಲನದಲ್ಲಿ  ೧೭ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಬ್ಧಚಿತ್ರಗಳು, ಜೊತೆಗೆ ೧೦ ಸಚಿವಾಲಯಗಳು ಮತ್ತು ಇಲಾಖೆಗಳು, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ವಿಷಯವನ್ನು ಹೊಂದಿವೆ. ಈ ವರ್ಷದ ಪಥಸಂಚಲನದ ವೈಶಿಷ್ಟ್ಯವೆಂದರೆ 'ಸಶಕ್ತ ಮತ್ತು ಸುರಕ್ಷಿತ ಭಾರತ' ಎಂಬ ಧ್ಯೇಯದೊಂದಿಗೆ ಸ್ಥಬ್ಧಚಿತ್ರಗಳು ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸುತ್ತವೆ. ಕರ್ನಾಟಕದ ಸ್ಥಬ್ಧಚಿತ್ರ ಲಕ್ಕುಂಡಿಯ ಶಿಲ್ಪಕಲೆಯನ್ನು ಬಿಂಬಿಸಲಿದೆ. ಆಕಾಶವಾಣಿಯೊಂದಿಗೆ ಮಾತನಾಡಿದ ರಕ್ಷಣಾ ಸಿಬ್ಬಂದಿಯ ಏರ್ ಕಮಾಂಡರ್ ಮನೀಶ್ ಸಭರ್ವಾಲ್, ಸಶಸ್ತ್ರ ಪಡೆಗಳಲ್ಲಿ ಜಂಟಿ ಮತ್ತು ಏಕೀಕರಣದ ಪರಿಕಲ್ಪನಾ ದೃಷ್ಟಿಕೋನವನ್ನು ಪ್ರದರ್ಶಿಸುತ್ತದೆ ಎಂದರು.

ಧ್ವನಿ : ಮನೀಶ್ ಸಭರ್ವಾಲ್ (೨೨ ಸೆಕೆಂಡ್ಸ್)

<><><><>

ಭಾರತದೊಂದಿಗೆ ವ್ಯಾಪಾರವನ್ನು ಪುನಾರಂಭಿಸುವ ಕುರಿತು ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್

ಸ್ಪಷ್ಟಪಡಿಸಿದ್ದಾರೆ. ವಾಷಿಂಗ್‌ಟನ್ ಡಿಸಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನದ ಆಡಳಿತ ೨೦೧೯ರಲ್ಲಿ ಭಾರತದೊಂದಗಿನ ವ್ಯಾಪಾರವನ್ನು ಸ್ಥಗಿತಗೊಳಿಸಲು ನಿರ್ಧರಿಸಿತ್ತು. ಆ ನಂತರ ಯಾವುದೇ ಬೆಳವಣಿಗೆಯಾಗಿಲ್ಲ ಎಂದರು. ಭಾರತ ಮತ್ತು ಅಮೆರಿಕ ನಡುವೆ ಬಲಿಷ್ಠ ಬಾಂಧವ್ಯವಿದ್ದು, ಉಭಯ ದೇಶಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆ ಜೊತೆಗೆ ಜಾಗತಿಕ ಒಳಿತಿಗಾಗಿ ಹಾಗೂ ದ್ವಿಪಕ್ಷೀಯ ಪಾಲುದಾರಿಕೆ ವೃದ್ಧಿಗೆ ಬದ್ಧವಾಗಿವೆ ಎಂದು ಹೇಳಿದ್ದಾರೆ.

<><><><>

ಕಳೆದ ನವೆಂಬರ್‌ನಲ್ಲಿ ನೌಕರರ ಭವಿಷ್ಯ ನಿಧಿ ಸಂಸ್ಥೆಗೆ - ಇಪಿಎಫ್ ಒ ಗೆ ೧೪ ಲಕ್ಷದ ೬೩ ಸಾವಿರ ಮಂದಿ ಹೊಸದಾಗಿ ಸೇರ್ಪಡೆಯಾಗಿದ್ದಾರೆ. ಅಕ್ಟೋಬರ್ ತಿಂಗಳಿಗೆ ಹೋಲಿಸಿದರೆ ಇದು ಶೇಕಡ ೯.೭ ರಷ್ಟು ಹೆಚ್ಚಳವಾಗಿದೆ. ಕಾರ್ಮಿಕ ಮತ್ತು ಔದ್ಯೋಗಿಕ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿಅಂಶಗಳಲ್ಲಿ ಉದ್ಯೋಗವಾಕಾಶ ಹೆಚ್ಚಳವಾಗುತ್ತಿದೆ. ಹೊಸ ಉದ್ಯೋಗಿಗಳಲ್ಲಿ ಜಾಗೃತಿ ಮೂಡುತ್ತಿದೆ ಎಂದು ತಿಳಿಸಿದೆ.

<><><><>

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಆಕಾಶವಾಣಿ ಕೇಂದ್ರದ ಸಾಮರ್ಥ್ಯ ಹೆಚ್ಚಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಈಗ ಇರುವ ಮೀಡಿಯಂ ವೇವ್, ಫ್ರೀಕ್ವೆನ್ಸಿ ಮಾಡ್ಯುಲೇಷನ್ ಟ್ರಾನ್ಸ್ ಮಿಷನ್‌ಗೆ ಅಂದರೆ ಎಫ್.ಎಂಗೆ ಬದಲಾಗುತ್ತಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ: ಎಲ್ ಮುರುಗನ್ ಇಂದು ಶಿವಮೊಗ್ಗ ದೂರದರ್ಶನ ಕೇಂದ್ರದಲ್ಲಿ ಟ್ರಾನ್ಸ್‌ಮೀಟರ್‌ಗೆ ಪೂಜೆ ಸಲ್ಲಿಸಿ, ಸಾಮರ್ಥ್ಯವೃದ್ಧಿಗೆ ಚಾಲನೆ ನೀಡಿದರು. ನಂತರ ಅವರು, ದೂರದರ್ಶನ ಮತ್ತು ಆಕಾಶವಾಣಿಯನ್ನು ಪ್ರಸ್ತುತ ದಿನಮಾನಗಳಿಗೆ ತಕ್ಕಂತೆ ಉನ್ನತೀಕರಿಸಲಾಗುತ್ತಿದೆ. ಅದಕ್ಕಾಗಿ ಅಗತ್ಯ ಹಣಕಾಸು ನೆರವನ್ನು ನೀಡಲು ಸರ್ಕಾರ ಬದ್ಧವಿದೆ. ಸ್ಥಳೀಯ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳಸುವಲ್ಲಿ ಆಕಾಶವಾಣಿ ಮತ್ತು ದೂರದರ್ಶನ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು.

<><><><>

೨೦೩೦ರ ವೇಳೆಗೆ ೧೦ ಸಾವಿರ ಜಿಯೋಗ್ರಾಫಿಕಲ್ ಇಂಡಿಕೇಷನ್-ಜಿಐ ಟ್ಯಾಗ್‌ಗಳನ್ನು ತಲುಪುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಜಿಐ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು ಈ

ಗುರಿಯನ್ನು ಸಂಪೂರ್ಣ ಸರ್ಕಾರಿ ವಿಧಾನದ ಮೂಲಕ ಸಾಧಿಸಲಾಗುವುದು ಮತ್ತು ಸರ್ಕಾರವು ಇದನ್ನು ಮೇಲ್ವಿಚಾರಣೆ ಮಾಡಲು ಒಂದು ಸಮಿತಿಯನ್ನು ರಚಿಸಲಿದೆ ಎಂದರು.

ಧ್ವನಿ : ಪಿಯೂಷ್ ಗೋಯಲ್ (೧೬ ಸೆಕೆಂಡ್ಸ್)

ಐಪಿಆರ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳ ಕುರಿತು ಮಾತನಾಡಿದ ಸಚಿವರು, ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ನಿಧಿ ಮತ್ತು ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯನ್ನು ಉಲ್ಲೇಖಿಸಿದರು.

<><><><>

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ನಾಳೆ ಬಿಹಾರ ಮತ್ತು ಉತ್ತರಪ್ರದೇಶ ಪ್ರವಾಸ ಕೈಗೊಳ್ಳಲಿದ್ದರೆ. ಅವರು, ಭಾರತ ರತ್ನ ಶ್ರೀ ಕರ್ಪೂರಿ ಠಾಕೂರ್ ಅವರ ೧೦೧ನೇ ಜಯಂತಿ ಅಂಗವಾಗಿ ಬಿಹಾರದ ಸಮಸ್ತಿಪುರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೇ ಅವರು, ಉತ್ತರಪ್ರದೇಶದ ಲಖನೌದಲ್ಲಿ ನಡೆಯಲಿರುವ ಉತ್ತರಪ್ರದೇಶ ದಿನಾಚರಣೆ ಕಾರ್ಯಕ್ರಮದಲ್ಲೂ ಸಹ ಪಾಲ್ಗೊಳ್ಳುವರು.

<><><><>

೭೦ ಸದಸ್ಯ ಬಲದ ದೆಹಲಿ ವಿಧಾನಸಭಾ ಚುನಾವಣಾ ಪ್ರಚಾರ ತಾರಕಕ್ಕೇರಿದೆ. ಬಿಜೆಪಿ, ಆಮ್ ಆದ್ಮಿ ಪಕ್ಷ ಹಾಗೂ ಕಾಂಗ್ರೆಸ್ ಪಕ್ಷಗಳ ನಾಯಕರು ರೋಡ್ ಶೋ, ಮನೆ ಮನೆ ಪ್ರಚಾರ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಮತದಾರರ ಮನ ಗೆಲ್ಲುವ ಕಸರತ್ತು ನಡೆಸುತ್ತಿದ್ದಾರೆ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಂದು ಕಿರಾಡಿ, ಕರೋಲ್‌ಬಾಗ್ ಮತ್ತು ಜನಕಪುರಿ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಲಿದ್ದಾರೆ. ಉತ್ತರಾಖಂಡ್ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ, ಪಾಲಮ್ ಮತ್ತು ದೆಹಲಿ ಕಂಟೋನ್ಮೆಂಟ್ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುವರು ಹಾಗೂ ನಗರ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್, ಮಾದಿಪುರ್ ಮತ್ತು ರೋಹಿಣಿ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಲಿಸದ್ದಾರೆ.  ಆಮ್ ಆದ್ಮಿ ಪಕ್ಷದ ಪರವಾಗಿ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ರೋಡ್ ಶೋ ನಡೆಸುವರು. ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ, ಮುಸ್ತಾಫ ಬಾದ್‌ನಲ್ಲಿ ಪಕ್ಷದ ಅಭ್ಯರ್ಥಿ ಪರ ಬೃಹತ್ ರ್‍ಯಾಲಿ ಕೈಗೊಳ್ಳಲಿದ್ದಾರೆ.

<><><><>

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ೧೨೮ ನೇ ಜನ್ಮ ದಿನಾಚರಣೆಯನ್ನು ಇಂದು ಪರಾಕ್ರಮ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ. ಸಂಸ್ಕೃತಿ ಸಚಿವಾಲಯವು ಮೂರು ದಿನಗಳ ಆಚರಣೆಯನ್ನು ಆಯೋಜಿಸಿದ್ದು, ನೇತಾಜಿಯವರ ಜನ್ಮಸ್ಥಳವಾದ ಒಡಿಶಾದ ಕಟಕ್‌ನಲ್ಲಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮವನ್ನು ಒಡಿಶಾದ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಜಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಹಲವು ಗಣ್ಯರು ನೇತಾಜಿಗೆ ಗೌರವ ನಮನ ಸಲ್ಲಿಸಲಿದ್ದಾರೆ ಮತ್ತು ನೇತಾಜಿ ಜನಿಸಿದ ಮನೆಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುವುದು. ಸುಭಾಷ್ ಚಂದ್ರ ಬೋಸ್ ಅವರ ನಿವಾಸವನ್ನು ಈಗ ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಬಾರಾಬತಿ ಕೋಟೆಯಲ್ಲಿ ಪರಾಕ್ರಮ ದಿನಾಚರಣೆಯು ಪ್ರಧಾನಿ ನರೇಂದ್ರ ಮೋದಿಯವರ ವೀಡಿಯೊ ಸಂದೇಶದೊಂದಿಗೆ ಆರಂಭವಾಗಲಿದೆ ಹಾಗೂ ನೇತಾಜಿಯವರ ಜೀವನ ಆಧರಿಸಿದ ಪುಸ್ತಕ, ಛಾಯಾಚಿತ್ರ ಮತ್ತು ವಸ್ತು ಪ್ರದರ್ಶನ ಒಳಗೊಂಡಿರುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಕಳೆದ ಭಾನುವಾರ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪರಾಕ್ರಮ ದಿನದ ಬಗ್ಗೆ ಉಲ್ಲೇಖಿಸಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕೊಡುಗೆಯನ್ನು ಸ್ಮರಿಸಿದ್ದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೫೨ ಸೆಕೆಂಡ್ಸ್)

ಪ್ರಧಾನಿಯವರು ನೇತಾಜಿಯವರ ದೂರದರ್ಶಿ ನಾಯಕತ್ವವನ್ನು ಹಾಗೂ ಅವರ ಧೈರ್ಯವನ್ನು ಬಣ್ಣಿಸಿದ್ದರು ಮತ್ತು ಅದು ದೇಶದ ಯುವಜನತೆಗೆ ಸ್ಫೂರ್ತಿ ನೀಡಲಿದೆ ಎಂದು ಹೇಳಿದ್ದರು.

<><><><>

ಮಹಿಳಾ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ಇಂದು ಸಂಜೆ ರಾಂಚಿಯಲ್ಲಿ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ವಾರಿಯರ್ಸ್, ದೆಹಲಿ ಎಸ್‌ಜಿ ಪೈಪರ್ಸ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೬.೧೫ಕ್ಕೆ ಆರಂಭವಾಗಲಿದೆ.

ರಾತ್ರಿ ೮-೧೫ಕ್ಕೆ ರೂರ್ಕೆಲಾದಲ್ಲಿ ಆರಂಭವಾಗಲಿರುವ ಪುರುಷರ ವಿಭಾಗದಲ್ಲಿ ತಮಿಳುನಾಡು ಡ್ರ್ಯಾಗನ್ಸ್ ತಂಡ, ಹೈದರಬಾದ್ ತೂಫಾನ್ಸ್ ತಂಡದ ಎದುರು ಸೆಣಸಲಿದೆ. ಕಳೆದ ರಾತ್ರಿ ನಡೆದ ಪುರುಷರ ವಿಭಾಗದ ಮತ್ತೊಂದು ಪಂದ್ಯದಲ್ಲಿ ಜೆಎಸ್‌ಡಬ್ಲ್ಯೂ ಸೂರ್ಮ ಹಾಕಿ ಕ್ಲಬ್, ದೆಹಲಿ ಎಸ್‌ಜಿ ಪೈಪರ್ಸ್ ವಿರುದ್ಧ ೨-೧ ಗೋಲುಗಳಿಂದ ಜಯಗಳಿಸಿದೆ.

<><> **ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು** <><>